## ಶ್ರೀ ಸಿದ್ದಲಿಂಗೇಶ್ವರ ಸ.ಹಿ.ಪ್ರಾ.ಹೆ.ಶಾಲೆ ಪೇಟೆ, ಶಿಕಾರಿಪುರ

**ಮುನ್ನುಡಿ:–**

**"ಶಿಕ್ಷಣವೆಂದರೆ ಕೇವಲ ಜ್ಞಾನ ಅಥವಾ ಮಾಹಿತಿ ಸಂಗ್ರಹಣೆಯ ಪರಿಕಲ್ಪನೆಯಿಂದ ಹೊರಬಂದು, ಜ್ಞಾನ ಕಟ್ಟಿಕೊಳ್ಳಲು ಮಕ್ಕಳನ್ನು ಪ್ರೇರೇಪಿಸುವುದೇ ಆಗಿದೆ"**

ಮಗುವಿನ ಸರ್ವತೋಮುಖ ಬೆಳವಣಿಗೆ ಹಾಗೂ ಗುಣಾತ್ಮಕ ಶಿಕ್ಷಣ ಸಾಕಾರಗೊಳಿಸುವ ನಿಟ್ಟಿನಲ್ಲಿ ಮೇಲ್ಸ್ತರದ ಎಲ್ಲಾ ಹಂತಗಳಿಂದ ವಿಭಿನ್ನ ಪ್ರಯತ್ನಗಳು ನಡೆಯುತ್ತಲಿವೆ. ಇದಕ್ಕೆಲ್ಲ ಮೂರ್ತರೂಪ ಕೊಟ್ಟು ಕಾಯಕಲ್ಪ ಕ್ರಿಯೆಗೆ ಒಳಗಾಗುವುದು. ಶಾಲೆಗಳಲ್ಲಿ ಅಂತಹ ಶಾಲೆಗಳನ್ನು ಭೌತಿಕವಾಗಿ, ಭದ್ಧಿಕವಾಗಿ ಅಭಿವೃದ್ಧಿ ಪಡಿಸುವ ಮೂಲಕ ಇಲಾಖೆಯ ಆಶೋತ್ತರಗಳನ್ನು ಈಡೇರಿಸಿ ಗುಣಾತ್ಮಕ ಶಿಕ್ಷಣವನ್ನು ನೀಡುತ್ತಿರುವ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಕಸಬಾ–1 ಸಮೂಹ ಸಂಪನ್ಮೂಲ ಕೇಂದ್ರದ ಶ್ರೀ ಸಿದ್ದಲಿಂಗೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆ ಪೇಟೆ ಶಿಕಾರಿಪುರ ಶಾಲೆಯು ಒಂದು ಜ್ವಲಂತ ಸಾಕ್ಷಿಯಾಗಿದೆ.

ಶಾಲೆಯು ಮುಖ್ಯೋಪಾಧ್ಯಾಯರು, ಸಹ ಶಿಕ್ಷಕರು ಮತ್ತು ಎಸ್‌ಡಿಎಂಸಿ ಹಾಗೂ ಪೋಷಕರ ಸಹಯೋಗದೊಂದಿಗೆ ಸರ್ವತೋಮುಖ ಬೆಳವಣಿಗೆಯಾಗುವಲ್ಲಿ ಅವಿರತ ಪ್ರಯತ್ನ ಪರಿಶ್ರಮದ ಲಕ್ಷಣಗಳನ್ನು ಒಳಗೊಂಡಿರುವುದು ಸಂತಸದ ವಿಷಯವಾಗಿದೆ.


ಈ ಯಶೋಗಾಥೆಯ ಹೊತ್ತಿಗೆಯು ಶಾಲೆಯು ಹಂತ ಹಂತವಾಗಿ ಬೆಳೆದು ಬಂದ ಹಾದಿ, ಇರುವ ಸಂಪನ್ಮೂಲಗಳನ್ನೇ ಹೇಗೆ ವ್ಯವಸ್ಥಿತವಾಗಿ ಸದ್ವಿನಿಯೋಗ ಮಾಡಿಕೊಳ್ಳಬಹುದು ಎಂಬುದನ್ನು ತಿಳಿಯಬಹುದು. ಒಂದು ಶಾಲೆಯ ಎಸ್‌ಡಿಎಂಸಿ, ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಮನಸ್ಸು ಮಾಡಿದರೆ ಅಸಾಧ್ಯವಲ್ಲ ಎಂಬುದು ನಮ್ಮ ಆಶಯ.

"ದೃಢ ಮನಸ್ಸು ಸತತ ಪ್ರಯತ್ನವೇ ಯಶಸ್ಸಿಗೆ ನಾಂದಿ"



**ಶಾಲೆ ಪ್ರಾರಂಭವಾದ ವರ್ಷ 1933, ಶ್ರೀ ಸಿದ್ದಲಿಂಗೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆ ಪೇಟೆ ಶಿಕಾರಿಪುರ ಎಂದು ನಾಮಕರಣವಾದ ವರ್ಷ 1975, ಸಹಶಿಕ್ಷಣ ಪ್ರಾರಂಭವಾದ ವರ್ಷ 2003–04, ಎಸ್‌ಎಸ್‌ಎ ಕಟ್ಟಡ ಉದ್ಘಾಟನೆಯಾದ ವರ್ಷ 2008–09.**









**ಶಾಲಾ ಇತಿಹಾಸ:–** ಸದರಿ ಶಾಲೆಯು 1933 ರಲ್ಲಿ ಕ್ರಿಶ್ಚಿಯನ್ ಮಿಶನರಿ ಕಟ್ಟಡದಲ್ಲಿ ಪ್ರಾರಂಭವಾಗಿದ್ದು, ನಂತರ ಮುನ್ಸಿಪಾಲಿಟಿ ಕಟ್ಟಡದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಾಗಿ ಮುಂದುವರೆದು ಕೆಲವು ವರ್ಷಗಳ ನಂತರ ಶಾಲಾ ಕಟ್ಟಡ ದುರಸ್ಥಿಯಾಗಿ, ಕೆಲವು ವರ್ಷಗಳ ಕಾಲ ಶ್ರೀ ಗಿಡ್ಡಯ್ಯನ ಗುಡಿ ದೊಡ್ಡಕೇರಿಯಲ್ಲಿ ನಡೆದು 1975 ರಲ್ಲಿ ಮಹಾ ದಾನಿಗಳಾದ ಶ್ರೀ ಸುರಗೀಹಳ್ಳಿ ಹಾಲಪ್ಪ ಮತ್ತು ಶ್ರೀ ಸುರಗೀಹಳ್ಳಿ ಪುಟ್ಟಪ್ಪನವರ ಸಹೋದರರು ಕಟ್ಟಿಸಿದ ಕಟ್ಟಡದಲ್ಲಿ ಆಗಿನ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್‌ರವರ ನೇತೃತ್ವದಲ್ಲಿ ಶ್ರೀ ಸಿದ್ದಲಿಂಗೇಶ್ವರ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕಿಯರ ಶಾಲೆ, ಪೇಟೆ, ಶಿಕಾರಿಪುರ ಎಂದು ಮರು ನಾಮಕರಣ ಹೊಂದಿ ಶಾಲೆಯು ಉತ್ತಮವಾಗಿ ನಡೆದು ನಂತರದ ದಿನಗಳಲ್ಲಿ ಉನ್ನತೀಕರಿಸಿದ ಶಾಲೆಯಾಗಿ ಅಂದಿನಿಂದ ಇಂದಿನವರೆಗೆ ಉತ್ತಮ ಸಿಬ್ಬಂಧಿ, ಉತ್ತಮ ಎಸ್‌ಡಿಎಂಸಿ ಮತ್ತು ಉತ್ತಮ ಪೋಷಕರ ನೆರವಿನೊಂದಿಗೆ ಶಾಲೆಯು ಅತ್ಯುತ್ತಮವಾಗಿ ನಡೆಯುತ್ತಿದೆ.




**ಕಛೇರಿ:–**ಶಾಲಾ ಅನುದಾನದಲ್ಲಿ ಸುಸಜ್ಜಿತವಾದ ಕಛೇರಿ ಕೊಠಡಿಯನ್ನು ವ್ಯವಸ್ಥೆ ಮಾಡಿರುತ್ತೇವೆ. ಕಛೇರಿಯಲ್ಲಿ ಎಲ್ಲಾ ಇಲಾಖಾ ದಾಖಲಾತಿಗಳು ಮತ್ತು ಆಟೋಟ ಸ್ಪರ್ಧೆಗಳಲ್ಲಿ ಪಡೆದ ಪುರಸ್ಕಾರಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ.


**ಸಿಬ್ಬಂಧಿ ಕೊಠಡಿ:–** ಸುಸಜ್ಜಿತವಾದ ಸಿಬ್ಬಂಧಿ ಕೊಠಡಿಯಿದ್ದು, ಸಿಬ್ಬಂಧಿಗಳಿಗೆ ಅಗತ್ಯವಾದ ಪೀಟೋಪಕರಣಗಳಿದ್ದು ಅವರ ಬೋಧನೆಗೆ ಅಗತ್ಯವಾದ ಪುಸ್ತಕಗಳು, ಪಾಟೋಪಕರಣಗಳು ಇತರೆ ಸೌಲಭ್ಯಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ.

**ಸರ್ಕಾರಿ ಸೌಲಭ್ಯಗಳ ವಿತರಣೆ:–**

ಈ ಮೇಲ್ಕಂಡ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ತಲುಪಿಸಿದ್ದೇವೆ. ದಾನಿಗಳಿಂದ ಮಕ್ಕಳಿಗೆ ಉಚಿತ ನೋಟ್‌ಬುಕ್ಸ್, ಪೆನ್, ಪೆನ್ಸಿಲ್ಸ್, ಬ್ಯಾಗ್ ಇತರೆ ಸೌಲಭ್ಯಗಳನ್ನು ಪಡೆದು ಪ್ರತೀ ವರ್ಷವು ವಿತರಿಸುತ್ತಿದ್ದೇವೆ.

**ಅಕ್ಷರ ದಾಸೋಹ**





ಸುಸಜ್ಜಿತವಾದ ಸಂಪನ್ಮೂಲ ಕೊಠಡಿಯಿದ್ದು ಎಲ್ಲಾ ತರಗತಿಗಳಿಗೆ ಸಂಬಂಧಿಸಿದಂತೆ ವಿಜ್ಞಾನ ವಿಷಯದ ಪ್ರಯೋಗಗಳ ಪರಿಕರಗಳನ್ನು ವ್ಯವಸ್ಥಿತವಾಗಿ ಜೋಡಿಸಲಾಗಿದೆ.

**ಆಟದ ಸಾಮಾನುಗಳು:–** ಶಾಲಾನುದಾನ ಹಾಗೂ ದುರಸ್ಥಿ ಅನುದಾನ ಮತ್ತು ಇತರೆ ಅನುದಾನ ಬಳಸಿ ಕೆಳಕಂಡಾಟದ ಉಪಕರಣಗಳನ್ನು ಸುಸಜ್ಜಿತವಾಗಿ ಜೋಡಿಸಲಾಗಿದೆ. ಸೀ ಸಾ, ಜಾರು ಬಂಡಿ, ಏರಿಳಿತ, ಜೋಕಾಲಿ ಈ ಉಪಕರಣಗಳನ್ನು ಮಕ್ಕಳು ತುಂಬಾ ಸಂತೋಷದಿಂದ ಬಳಸುತ್ತಿದ್ದಾರೆ

**ಕೈತೋಟ:–** ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಮತ್ತು ಮಕ್ಕಳ ನೆರವಿನಿಂದ ಶಾಲಾ ಮುಂದಿನ ಆವರಣದಲ್ಲಿ ಮನಮೋಹಕವಾದ ಕೈತೋಟವನ್ನು ನಿರ್ಮಿಸಲಾಗಿದೆ.

**ಶ್ರಮದಾನ:–** ಮುಖ್ಯ ಶಿಕ್ಷಕರ, ಸಹ ಶಿಕ್ಷಕರ, ಎಸ್‌ಡಿಎಂಸಿಯವರ ಮತ್ತು ವಿದ್ಯಾರ್ಥಿಗಳ ನೆರವಿನಿಂದ ಸ್ವಚ್ಛಭಾರತ ಆಂದೋಲನದಡಿ ಪ್ರತಿ ವರ್ಷ ಗಾಂಧಿ ಜಯಂತಿ ದಿನದಂದು ಶಾಲಾ ಆವರಣಸ್ವಚ್ಛಗೊಳಿಸಲಾಯಿತು ಹಾಗೂ ಶ್ರಮದಾನ ಕಾರ್ಯಕ್ರಮ ಯಶಸ್ವಿಗೊಳಿಸಲಾಯಿತು.

**ದಾನಿಗಳಿಂದ ವಸ್ತುಗಳ ಸಂಗ್ರಹ:–**

| ಕ್ರ.ಸಂ | ವಸ್ತುಗಳು | ದರ |
|---|---|---|
| 1 | ಹಿತ್ತಾಳೆ ದೀಪಗಳು | 600.00 |
| 2 | ವಾಲ್ ಫ್ಯಾನ್ | 2100.00 |
| 3 | ಸೀಲಿಂಗ್ ಫ್ಯಾನ್ | 1100.00 |
| 4 | ಜಮಖಾನ | 1700.00 |
| 5 | ಗೋಡೆಗಡಿಯಾರ 2 | 600.00 |
| 6 | ಹಾರೆ | 600.00 |
| 7 | ವಾಟರ್ ಫಿಲ್ಟರ್ 20 ಲೀಟರ್ | 1000.00 |
| 8 | ಟೇಬಲ್ ಕ್ಲಾತ್ 2 | 500.00 |

ಈ ಮೇಲಿನಂತೆ ದಾನಿಗಳಿಂದ ಶಾಲೆಯ ಅಭಿವೃದ್ಧಿಗೆ ವಸ್ತುಗಳನ್ನು ಸಂಗ್ರಹಿಸಲಾಗಿದೆ

**ದಾನಿಗಳಿಂದ ಸಸ್ಯ ಸಂಗ್ರಹ:–** ದಾನಿಗಳಿಂದ 8 ತೆಂಗಿನ ಸಸಿಗಳು, 2 ಸಂಪಿಗೆ ಗಿಡಗಳು, 4 ಪೇರಲ ಗಿಡಗಳು ಮತ್ತು ಇತರೆ ಸಸ್ಯಗಳನ್ನು ಪಡೆಯಲಾಗಿದೆ.

ವನಮಹೋತ್ಸವ ಕಾರ್ಯಕ್ರಮವನ್ನು ಶ್ರೀ ಕ್ಷೇತ್ರ ಮಂಜುನಾಥ ಧರ್ಮಸ್ಥಳ ಸಂಘ ಹಾಗೂ ನಮ್ಮ ಶಾಲೆಯ ಸಹಯೋಗದೊಂದಿಗೆ ಆಚರಿಸಲಾಯಿತು.

**ಎಸ್‌ಡಿಎಂಸಿ ಸಭೆ:–**ಪ್ರತಿ ತಿಂಗಳು ಎಸ್‌ಡಿಎಂಸಿ ಸಭೆಯನ್ನು ವ್ಯವಸ್ಥಿತವಾಗಿ ನಿರ್ವಹಿಸಲಾಗುತ್ತಿದೆ.

**ಜಂತು ಹುಳು ನಿವಾರಣಾ ದಿನ:–**ಪ್ರತಿ ವರ್ಷ ನಡೆಯುವ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ನಮ್ಮ ಶಾಲೆಯಲ್ಲಿ ಆಚರಿಸಲಾಗುತ್ತಿದೆ.

**ನಲಿ ಕಲಿ ಕೊಠಡಿ:–**ಶಾಲಾನುದಾನದಲ್ಲಿ ಅತ್ಯುತ್ತಮವಾದ ನಲಿಕಲಿ ಕೊಠಡಿಯನ್ನು ಸಿದ್ಧಗೊಳಿಸಲಾಗಿದೆ.



ವಾರದಲ್ಲಿ ಒಂದು ದಿನ ಮಕ್ಕಳಿಂದ ಕರಕುಶಲ ಚಟುವಟಿಕೆಗಳನ್ನು ಮಾಡಿಸಲಾಗುತ್ತಿದೆ.

ಬೋಧನಾ ಅವಧಿಯಲ್ಲಿ ಶಿಕ್ಷಕರ ನೆರವಿನಿಂದ ಕಲಿಕಾ ಚಟುವಟಿಕೆಗಳನ್ನು ಅತ್ಯುತ್ತಮವಾಗಿ ಮಾಡಿಸಲಾಗುತ್ತಿದೆ.

ಪ್ರತಿ ಶನಿವಾರ ಇಲಾಖೆಯ ಆದೇಶದಂತೆ ಈ ಕೆಳಗಿ ಕಾರ್ಯಕ್ರಮ ನಡೆಸುತ್ತಿದ್ದೇವೆ.

1. ವಿಜ್ಞಾನ ಪ್ರಯೋಗಗಳು
2. ವಿನೋದ ಗಣಿತ
3. ರಸಪ್ರಶ್ನೆ ಕಾರ್ಯಕ್ರಮ
4. ಮಾಡಿ ಕಲಿ
5. ವಿಷಯ ವೇದಿಕೆ
6. ಕಸದಿಂದ ರಸ ಚಟುವಟಿಕೆ
7. ಚರ್ಚಾಕೂಟ
8. ಸಾಂಸ್ಕೃತಿಕ ಕಾರ್ಯಕ್ರಮಗಳು
9. ಪಠ್ಯೇತರ ಚಟುವಟಿಕೆ
10. ನೋಬ್ಯಾಗ್ ಡೇ ಕಾರ್ಯಕ್ರಮ
11. ಪುಸ್ತಕ ಪರಿಚಯ
12. ಕರ ಕುಶಲ ಚಟುವಟಿಕೆಗಳು
13. ಮೌಲ್ಯ ಶಿಕ್ಷಣ– ಕಥೆ ಹೇಳುವುದು

ಈ ಎಲ್ಲಾ ಕಾರ್ಯಕ್ರಮಗಳನ್ನು ಶಿಕ್ಷಕರು ಮತ್ತು ವಿಜ್ಞಾನ ಸಂಘ, ಸಾಂಸ್ಕೃತಿಕ ಸಂಘ, ಗಣಿತ ಸಂಘದ ಎಲ್ಲಾ ಮಾರ್ಗದರ್ಶಿ ಶಿಕ್ಷಕರ ಹಾಗೂ ಮಕ್ಕಳ ಸಹಾಯದೊಂದಿಗೆ ನಡೆಸಲಾಗುತ್ತಿದೆ.

**ಆಚರಣೆಗಳು:–**ಇಲಾಖಾ ಮಾರ್ಗದರ್ಶನದಂತೆ ಆಚರಣೆಗಳನ್ನು ಪ್ರತಿ ವರ್ಷ ಉತ್ತಮವಾಗಿ ಆಚರಿಸಲಾಗುತ್ತಿದೆ.

**ಉಪಸಂಹಾರ:–**ಸಮಾಜದ ಸಹಕಾರ, ಇಲಾಖಾ ಮಾರ್ಗದರ್ಶನದೊಂದಿಗೆ ಶಾಲೆಯು ಉತ್ತಮವಾಗಿ ನಡೆಯುತ್ತಿದ್ದು ಸುಸಜ್ಜಿತ ಕಟ್ಟಡದಿಂದ ಕೂಡಿದೆ. ಶಾಲಾ ಕೈತೋಟ ಸುಂದರವಾಗಿದೆ. ಆಟೋಪಕರಣಗಳು ಮಕ್ಕಳನ್ನು ಶಾಲೆಯತ್ತ ಸೆಳೆಯುವಲ್ಲಿ ಯಶ ಕಂಡಿದೆ. 5 ತೆಂಗಿನ ಮರಗಳು ಫಲ ನೀಡುತ್ತಿದ್ದು ಅಕ್ಷರ ದಾಸೋಹ ಕಾರ್ಯಕ್ರಮಕ್ಕೆ ಸಹಕಾರಿಯಾಗಿದೆ. ತೇಗದ ಮರಗಳು ಶಾಲಾ ಸೊಬಗನ್ನು ಹೆಚ್ಚಿಸಿವೆ. ಉತ್ತಮವಾದ ಆಟದ ಮೈದಾನವಿದ್ದು ಮಕ್ಕಳ ಭೌತಿಕ ವಿಕಾಸಕ್ಕೆ ಪರಿಣಾಮಕಾರಿಯಾಗಿದೆ. ನಲಿ ಕಲಿ ಹಾಗೂ ಸಿಸಿಇ ಮಾದರಿಗಳನ್ನು ಅಳವಡಿಸಿಕೊಂಡು ಉತ್ತಮ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಶ್ರಮವಹಿಸುತ್ತಿದ್ದಾರೆ. ಒಟ್ಟಾರೆಯಾಗಿ ಶಾಲೆಯು ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಭೌತಿಕ ಬೆಳವಣಿಗೆಗೆ ಎಸ್‌ಡಿಎಂಸಿ ಹಾಗೂ ಶಿಕ್ಷಕರ ಪಾತ್ರ ಹಿರಿದಾಗಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿದೆ.